# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ವೆಂಕಟೇಶ, ಪಿಡಿಓ, ತಗ್ಗಿಕುಪ್ಪೆ ಗ್ರಾಮ ಪಂಚಾಯತಿ, ತಾಲ್ಲೂಕು ಮಾಗಡಿ, ರಾಮನಗರ ಜಿಲ್ಲೆ ಇವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು.

**ಓದಲಾಗಿದೆ:**
1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-841/2015/ಡಿಆರ್‌ಇ-5, ದಿನಾಂಕ: 18-04-2017.
2. ಮಾನ್ಯ ಉಪಲೋಕಾಯುಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ-841/2015/ಡಿಆರ್‌ಇ-5, ದಿನಾಂಕ: 31-03-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ: 18-04-2017 ರವರ ಪತ್ರದೊಂದಿಗೆ ಕನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀ ಟಿ.ಆರ್.ಚಿಕ್ಕಣ್ಣ, ಶ್ರೀ ರಂಗ ನಿಲಯ, ಕೃಷ್ಣ ದೇವಸ್ಥಾನದ ಹತ್ತಿರ, ದೊಡ್ಡಬೊಮ್ಮಸಂದ್ರ, ಬೆಂಗಳೂರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ ಜಯಮಾಧವ.ಪಿ. ವಿಶೇಷ ಭೂಸದ್ವಾಧೀನಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ (2) ಶ್ರೀ ಶಿವಕುಮಾರ್, ತಹಶೀಲ್ದಾರ್, ತಾಲ್ಲೂಕು ಮಾಗಡಿ, ರಾಮನಗರ (3) ಶ್ರೀ ಟಿ. ವೆಂಕಟೇಶ್, ಗ್ರಾಮ ಲೆಕ್ಕಿಗ, ಅಧಿಕ ಪ್ರಭಾರ ರಾಜಸ್ವ ನಿರೀಕ್ಷಕರು, ತಿಪ್ಪಸಂದ್ರ ಹೋಬಳಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು (4) ಶ್ರೀ ವೆಂಕಟೇಶ, ಪಿಡಿಓ, ತಗ್ಗಿಕುಪ್ಪೆ ಗ್ರಾಮ ಪಂಚಾಯತಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ್ದಾರೆ.

**ದೂರಿನ ಸಂಕ್ಷಿಪ್ತ ವಿವರಣೆ:**

ತಗ್ಗಿಕುಪ್ಪೆ ಗ್ರಾಮದ ಸ.ನಂ.15/1 ರಲ್ಲಿ 3ಗು. ಮತ್ತು ಸ.ನಂ.15/2 ರಲ್ಲಿ 2ಗು. ಜಮೀನನ್ನು ರಸ್ತೆಗಾಗಿ ಭೂ ಸ್ವಾಧೀನ ಮಾಡಿಕೊಂಡಿದ್ದಾರೆ. ಸದರಿ ಜಮೀನುಗಳಿಗೆ ಇದ್ದ ರಸ್ತೆಯನ್ನು ಬದಲಿಸಿದ್ದು ಈ ಪ್ರಸ್ತಾವನೆಯನ್ನು ರದ್ದು ಪಡಿಸಿ ತಗ್ಗಿಕುಪ್ಪೆಯಿಂದ ಬೆಟ್ಟದಾಸಿಪಾಳ್ಯದವರೆಗೆ ಹಾಲಿ ಇರುವ ನಕಾಶೆಯ ರಸ್ತೆಯನ್ನು ಅಭಿವೃದ್ಧಿಪಡಿಸಿಕೊಡುವಂತೆ ಕೋರಿಕೊಂಡಿದ್ದಾರೆ.

ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. 1 ಮತ್ತು 3 ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಅಂಶಗಳನ್ನು ಅಲ್ಲಗಳೆದಿದ್ದಾರೆ. ಭೂಸ್ವಾದೀನ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದು ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಪೂರ್ವಾನುಮತಿ ಪಡೆಯಲಾಗಿದೆ. ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಯಾವುದೇ ನಿಯಮ ಮತ್ತು ಕಾಯ್ದೆ ಉಲ್ಲಂಘಿಸಿಲ್ಲ. ಭೂಸ್ವಾಧೀನ ಪ್ರಕ್ರಿಯೆ ಇಮದ ದೂರುದಾರರಿಗೂ ಸಹ ಅನುಕೂಲ ಇದೆ. ಆದ್ದರಿಂದ ದೂರನ್ನು ವಜಾ ಮಾಡಲು ಕೋರುತ್ತಾರೆ.

2 ಮತ್ತು 4 ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕಲಂ 4(1) ರಡಿಯಲ್ಲಿ ಅಧಿಸೂಚನೆಕೊಟ್ಟಾಗ ತಕರಾರುಗಳೇನಾದರು ಇದ್ದಲ್ಲಿ ಸಲ್ಲಿಸಲು ಪ್ರಕಟಿಸಲಾಗಿತ್ತು. ಸ.ನಂ.15/1 ಮತ್ತು 15/2 ರ ಖಾತೆದಾರರು ಆಕ್ಷೇಪಣೆ ಮಾಡಿ ಈಗಾಗಲೇ ದಾರಿ ಇರುವುದರಿಂದ ಮತ್ತೆ ಭೂ ಸ್ವಾಧೀನ ಏಕೆ ಆಗುತ್ತಿದೆ ಅಂತ ಆಕ್ಷೇಪಿಸಿದ್ದು ಸದರಿ ದಾರಿಯು ಜಮೀನಿನ ಉತ್ತರ ದಿಕ್ಕಿನಲ್ಲಿ ಹಾದು ಹೊಗುತ್ತಿದೆ. ಈ ನಕಾಶೇಯ ದಾರಿ ಕಲ್ಲು ಬಂಡೆಯಿಂದ ಕೃಷಿ ಸಲಕರಣೆ ಮತ್ತು ಎತ್ತಿನ ಗಾಡಿಯನ್ನು ತೆಗೆದುಕೊಂಡು ಹೋಗಲು ಬರುವುದಿಲ್ಲ. ಆದ್ದರಿಂದ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ದೂರನ್ನು ಕೈಬಿಡಲು ಕೋರಿಕೊಂಡಿದ್ದಾರೆ.

4 ನೇ ಎದುರುದಾರರು ಸಾಮಾನ್ಯ ಸಭೆಯ ತೀರ್ಮಾನದಂತೆ ಭೂ ಸ್ವಾಧೀನ ಪಡಿಸಿಕೊಳ್ಳಲು ನಿರ್ಧರಿಸಲಾಗಿದೆ. ತಾಲ್ಲೂಕು ಪಂಚಾಯ್ತಿ ಇ.ಓ. ರವರು ಖುದ್ದಾಗಿ ಸ್ಥಳ ಪರಿಶೀಲಿಸಿ ಸಾರ್ವಜನಿಕ ರಸ್ತೆ ನಿರ್ಮಾನಕ್ಕಾಘಿ ಭೂ ಸ್ವಾಧೀನ ಪಡಿಸಿಕೊಳ್ಳಲು ಕ್ರಮ ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ ಎಂದು ವರದಿ ಸಲ್ಲಿಸಿದ್ದು, ನಕಾಶೆ ಕಂಡ ದಾರಿಯು ಕಲ್ಲು ಬಂಡೆಯಿಂದ ಕೂಡಿದೆ. ಆದ್ದರಿಂದ ಅಲ್ಲಿ ರಸ್ತೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲ ಅಂತ ಆಕ್ಷೇಪಣೆ ಸಲ್ಲಿಸಿದ್ದಾರೆ.

ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ತಗ್ಗಿಕುಪ್ಪೆಯಿಂದ ಬಟ್ಟದಾಸಿಪಾಳ್ಯಕ್ಕೆ ಸುಮಾರು 3ಕಿ.ಮೀ. ಅಂತರವಿದೆ. ನಡುವೆ ಬೇರೆ ಬೇರೆ ಸ.ನಂ.ಗಳು ಇದ್ದು, ಅವುಗಳನ್ನು ಸ್ವಾಧೀನಪಡಿಸಿಕೊಂಡಿಲ್ಲ. ಭೂ ಸ್ವಾಧೀನಕ್ಕೆ ತಗಲುವ ವೆಚ್ಚವನ್ನು ಯಾವ ಇಲಾಖೆಯವರು ಭರಿಸುತ್ತಾರೆ ಅಂತ ಸಿ.ಇ.ಓ. ರವರು ಹೇಳಿದ್ದು, ಗ್ರಾಮ ಪಮಚಾಯ್ತಿ ಅಧಿಕಾರಿಯವರು ಸದರಿ ಜಮೀನಿನ ಪಕ್ಕದಲ್ಲಿ ಸರ್ಕಾರಿ ರಸ್ತೆ ಇಲ್ಲ ಅಂತ ತಪ್ಪು ವರದಿ ಸಲ್ಲಿಸಿದ್ದಾರೆ. ಎದುರುದಾರರ ತಂದೆ ಶ್ರೀ ರಂಗಯ್ಯ ಮಾಗಡಿ ವಿಜಯ ಬ್ಯಾಂಕಿನಲ್ಲಿ 1,33,000/- ರೂ.ಗಳನ್ನು ಜಮಾ ಮಾಡಿದ್ದಾರೆ. ಕೇವಲ ತಮ್ಮ ಜಮೀನಿಗೆ ಸರಾಗವಾಗಿ ಹೋಗಿಬರಲು ನಈ 2 ಜಮೀನುಗಳನ್ನು ಮಾತ್ರ ಭೂ ಸ್ವಾಧೀನ ಪಡಿಸಿಕೊಂಡಿರುವುದಾಗಿ ಹೇಳಿದ್ದಾರೆ. ಬೇರೆ ಯಾವುದೇ ಜಮೀನುಗಳನ್ನು ರಸ್ತೆ ಸಲುವಾಗಿ ಸ್ವಾಧೀನಪಡಿಸಿಕೊಂಡಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಲು ಕೋರುತ್ತಾರೆ.

ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ಹೇಳುವ ಪ್ರಕಾರ ಎದುರುದಾರರು ಎಲ್ಲರೂ ಸೇರಿಕೊಂಡು ಆರ್.ಎಫ್.ಓ. ಶಿವಾನಂದ ಸ್ವಾಮಿ ಎನ್ನುವವರ ಜಮೀನಿಗೆ ಹೋಗಲು ಸಮೀಪದ ದಾರಿ ನಿರ್ಮಿಸುವ ಸಲುವಾಗಿ ದೂರುದಾರರ ಜಮೀನು ವಶಪಡಿಸಿಕೊಳ್ಳಲಾಗಿದೆ. ಕಲಂ 4(1) ಅಡಿಯಲ್ಲಿ ಈಗಾಗಲೇ ಕರ್ನಾಟಕ ರಾಜ್ಯ ಪತ್ರದಲ್ಲಿ ನೋಟಿಸು ಹಾಕಲಾಗಿದೆ. ಪಿಡಿಓ ರವರು ದಿ:12-03-2012 ರಂದು ತಹಶೀಲ್ದಾರ್ ಮಾಗಡಿ ಇವರಿಗೆ ಪತ್ರ ಬರೆದು ಸಾರ್ವಜನಿಕ ಜಮೀನಿಗೆ ಹೋಗಲು ರಸ್ತೆ ಇಲ್ಲದೆ ಇರುವುದರಿಂದ ಜಮೀನು ಸಹ ಇದ್ದು, ಇದರ ಪಕ್ಕದಲ್ಲಿ ಸರ್ಕಾರಿ ಜಮೀನು ಇರುವುದಿಲ್ಲ. ಆದ್ದರಿಂದ ಸಾರ್ವಜನಿಕ ರಸ್ತೆ ನಿರ್ಮಾಣ ಅವಶ್ಯಕವಾಗಿದೆ ಅಂತ ತಿಳಿಸಿದ್ದಾರೆ. ನಿಧಿ 1ಕ್ಕೆ 1,33,000/- ರೂಗಳನ್ನು ರಂಗಯ್ಯ ಎನ್ನುವವರು ಕಟ್ಟಿದ್ದಾರೆ ಎನ್ನುವ ವಿಷಯದ ಬಗ್ಗೆ ಪಿಡಿಓ ರವರು ಯಾವುದೇ ಆಕ್ಷೇಪಣೆ ಸಲ್ಲಿಸಿಲ್ಲ. ಎ.ಸಿ.ರಾಮನಗರ ಇವರು ಭು ಸ್ವಾಧೀನಕ್ಕೆ ತಗಲುವ ವೆಚ್ಚವನ್ನು ಯಾವ ಇಲಾಖೆಯವರು ಭರಿಸುತ್ತಾರೆ ಎನ್ನುವ ಬಗ್ಗೆ ಸಿ.ಇ.ಓ. ರವರಿಂದ ಪೂರ್ವಾನುಮತಿ ಅವಶ್ಯಕತೆಯಿದೆ.

ಸದರಿ ಜಮೀನಿನ ಪಕ್ಕದಲ್ಲಿ ಸರ್ಕಾರಿ ಜಮೀನು ಲಭ್ಯವಿದೆಯೇ ಮತ್ತು ಕೋರಿರುವ ಸ್ಥಳದಲ್ಲಿ ಸಾರ್ವಜನಿಕ ರಸ್ತೆ ಅವಶ್ಯಕತೆವಿದೆಯೇ ಎನ್ನುವ ಬಗ್ಗೆ ವರದಿಯನ್ನು ನೀಡಲು ಮಾಗಡಿ ತಹಶೀಲ್ದಾರ್ ರವರಿಗೆ ಸೂಚಿಸಿದ್ದಾರೆ. ದಿ: 10-02-2012 ರಲ್ಲಿ ಈ ಪತ್ರಕ್ಕೆ ತಹಶೀಲ್ದಾರ್ ರವರು ಪಿಡಿಓ ರವರಿಂದ ಮಾಹಿತಿ ಕೇಳಿದ್ದು ಪಿಡಿಓ ರವರು ಪಕ್ಕದಲ್ಲಿ ಯಾವುದೇ ಸರ್ಕಾರಿ ಜಮಿನು ಇರುವುದಿಲ್ಲ ಅಂತ ಸುಳ್ಳು ಮಾಹಿತಿ ಕೊಟ್ಟಿದ್ದಾರೆ. ಈ ಮಾಹಿತಿಯ ಆಧಾರದ ಮೇಲೆ ಮುಂದಿನ ಕ್ರಕ್ರಿಯೆ ನಡೆದಂತೆ ತೋರುತ್ತದೆ. ಪಿಡಿಓ ರವರು ತಮ್ಮ ವರದಿಯಲ್ಲಿ ಸ.ನಂ. 15/1 ಮತ್ತು 15/2 ರ ಪಕ್ಕದಲ್ಲಿಯೇ ನಕಾಶೆ ಕಂಡ ದಾರಿ ಇದೆ ಎನ್ನುವುದನ್ನು ತಹಶೀಲ್ದಾರ್ ರವರಿಗೆ ತಿಳಿಸಿಲ್ಲ. ಆದ್ದರಿಂದ ಈ ಪ್ರಕರಣದ 4ನೇ ಎದರುದಾರರು ಕರ್ತವ್ಯಲೋಪವನ್ನು ಎಸಗಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಭೂ ಸ್ವಾಧೀನ ಕಾಯ್ದೆ 2013 ದಿ: 01-01-2014 ರಿಂದ ಜಾರಿಗೆ ಬಂದಿದೆ. ಆದ್ದರಿಂದ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ. ಹಳೆಯ ಭೂ ಸ್ವಾಧೀನ ಕಾಯ್ದೆ 1984 ಅಡಿಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದ್ದು, ದುರುದಾರರಿಗೆ ಯಾವುದಾದರೂ ತಕರಾರುಗಳಿದ್ದರೆ ಅಥವಾ ಭೂ ಸ್ವಾಧೀನದ ನೋಟಿಫಿಕೇಷನ್ ಅನ್ನು ರದ್ದುಪಡಿಸಬೇಕು ಅಂತ ಕೇಳುತ್ತಿದ್ದಲ್ಲಿ ರಿಟ್ ಅರ್ಜಿ ಮಾತ್ರ ದಾಖಲಿಸಬಹುದಾಗಿದೆ. ಆದ್ದರಿಂದ 1, 2 ಮತ್ತು 3 ಎದುರುದಾರರನ್ನು ಈ ಪ್ರಕರಣದಿಂದ ಕೈಬಿಟ್ಟು, 4ನೇ ಎದುರುದಾರರಾದ ಪಿಡಿಓ ತಗ್ಗಿಕುಪ್ಪೆ ಇವರ ವಿರುದ್ಧ ತಪ್ಪು ವರದಿ ಕೊಟ್ಟಿರುವ ಕಾರಣದಿಂದಾಗಿ ಕರ್ತವ್ಯಲೋಪವಾಗಿದೆ ಅಂತ ಹೇಳಲು ಸಾಕಷ್ಟು ಆಧಾರಗಳಿವೆ.

ಆದ್ದರಿಂದ 4ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966 ರ ನಿಯಮ 3(i)(ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರಡಿಯಲ್ಲಿ 4 ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಶ್ರೀ ವೆಂಕಟೇಶ, ಪಿಡಿಓ, ತಗ್ಗಿಕುಪ್ಪೆ ಗ್ರಾಮ ಪಂಚಾಯತಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ವೆಂಕಟೇಶ, ಪಿಡಿಓ, ತಗ್ಗಿಕುಪ್ಪೆ ಗ್ರಾಮ ಪಂಚಾಯತಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ 14(ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಇವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 26 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಮನಗರ ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.
6) ಶ್ರೀ ವೆಂಕಟೇಶ, ಪಿಡಿಓ, ತಗ್ಗಿಕುಪ್ಪೆ ಗ್ರಾಮ ಪಂಚಾಯತಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ
7) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.